**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್ ಅರುಣ್ ರವರಿಂದ ನಿಯಮ -72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ.**

**ಸೂಚನೆ:**

"1975ನೇ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ (ಸಮಯದಲ್ಲಿ) ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಸೆರೆಮನೆವಾಸ ಅನುಭವಿಸಿ ಮತ್ತು ಭೂಗತರಾಗಿ ಹೋರಾಟ ನಡೆಸಿ ಪ್ರಜಾಪ್ರಭುತ್ವವನ್ನು ಉಳಿಸಿದ ಜನರಿಗೆ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಅನೇಕ ವರ್ಷಗಳಿಂದ ಪಿಂಚಣಿ ನೀಡುತ್ತಿರುವಂತೆ ಅಥವಾ ಗೌರವಧನ ನೀಡುತ್ತಿರುವಂತೆ, ಇಲ್ಲಿನ ಸರ್ಕಾರದಿಂದ ನೀಡುವ ಬಗ್ಗೆ" ಸದನದ ಮೂಲಕ ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯಲು ಬಯಸುತ್ತೇನೆ.

*****

**ಹೇಳಿಕೆ:**

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ (ಸಮಯದಲ್ಲಿ) ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ, ಸೆರೆಮನೆವಾಸ ಅನುಭವಿಸಿದ ಮತ್ತು ಭೂಗತ ಚಟುವಟಿಕೆಗಳಲ್ಲಿ ಭೂಗತರಾಗಿ ಹೋರಾಟ ನಡೆಸಿದವರ ಕುರಿತು ಎಲ್ಲಾ ಜಿಲ್ಲೆಗಳಿಂದ ಮಾಹಿತಿಗಳನ್ನು ಪಡೆದು ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಪ್ರಸ್ತುತ ಈ ಪ್ರಸ್ತಾವನೆಯ ಅಗತ್ಯವಿಲ್ಲವೆಂದು ನಿರ್ಧರಿಸಲಾಗಿದೆ.

(ಆರ್.ಅಶೋಕ)
ಕಂದಾಯ ಸಚಿವರು

ಸಿಆಸುಇ 49 ಪಿಎಫ್‌ಜಿ 2022